**All India Radio: Bangalore**
**National Bulletin In Kannada**
**04.06.2025 1.10 pm.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**04.06.2025 1.10 pm.**

********

ಮುಖ್ಯಾಂಶಗಳು

೧. ನವದೆಹಲಿಯಲ್ಲಿಂದು ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಸಚಿವ ಸಂಪುಟ ಸಭೆ

೨. ಭಾರತೀಯ ರಿಸರ್ವ್ ಬ್ಯಾಂಕಿನ ಹಣಕಾಸು ನೀತಿ ಸಮಿತಿ-ಎಂಪಿಸಿ ಸಭೆ; ರೆಪೊ ದರ ಕಡಿತದ ಬಗ್ಗೆ ಚರ್ಚೆ

೩. ಐಪಿಎಲ್ ಟಿ-೨೦ ಕ್ರಿಕೆಟ್‌ನ ೧೮ನೇ ಆವೃತ್ತಿಯ ವಿಜೇತರಾದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ, ಇಂದು ಬೆಂಗಳೂರು ನಗರಕ್ಕೆ ಆಗಮನ; ವಿಜಯೋತ್ಸವದಲ್ಲಿ ಭಾಗಿ

೪. ಲಡಾಖ್ ಸ್ವಾಯತ್ತ ಗುಡ್ಡಗಾಡು ಅಭಿವೃದ್ಧಿ ಮಂಡಳಿ ತಿದ್ದುಪಡಿ ನಿಯಂತ್ರಣ ನಿಯಮಗಳನ್ನು ಪ್ರಕಟಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು

೫. ಅಸ್ಸಾಂನಲ್ಲಿ ಮುಂದುವರಿದ ಪ್ರವಾಹ ಪರಿಸ್ಥಿತಿ; ೨೧ ಜಿಲ್ಲೆಗಳ ೬ ಲಕ್ಷದ ೩೦ ಸಾವಿರಕ್ಕೂ ಹೆಚ್ಚು ಜನರು ಬಾಧಿತ; ಸಾವಿನ ಸಂಖ್ಯೆ ೧೨ ಕ್ಕೆ ಏರಿಕೆ

*****************

ನವದೆಹಲಿಯಲ್ಲಿಂದು ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಸಚಿವ ಸಂಪುಟ ಸಭೆ ನಡೆಯಲಿದೆ. ಪಹಲ್ಗಾಮ್ ಭಯೋತ್ಪಾದಕ ದಾಳಿ ಮತ್ತು ಆಪರೇಷನ್ 'ಸಿಂದೂರ' ಅಡಿಯಲ್ಲಿ ಪಾಕಿಸ್ತಾನದ ವಿರುದ್ಧ ದೇಶವು ನಡೆಸಿದ ಪ್ರತೀಕಾರದ ಕ್ರಮಗಳ ನಂತರ ನಡೆಯುತ್ತಿರುವ ಮೊದಲ ಕೇಂದ್ರ ಸಚಿವ ಸಂಪುಟ ಸಭೆ ಇದಾಗಿದೆ. ನವದೆಹಲಿಯಲ್ಲಿಂದು ಪ್ರಧಾನಿ ನರೇಂದ್ರ ಮೋದಿ ಅವರ

ಅಧ್ಯಕ್ಷತೆಯಲ್ಲಿ ಕೇಂದ್ರ ಸಚಿವ ಸಂಪುಟ ಸಭೆ ನಡೆಯಲಿದೆ. ಪಹಲ್ಗಾಮ್ ಭಯೋತ್ಪಾದಕ ದಾಳಿ ಮತ್ತು ಆಪರೇಷನ್ 'ಸಿಂದೂರ' ಅಡಿಯಲ್ಲಿ ಪಾಕಿಸ್ತಾನದ ವಿರುದ್ಧ ದೇಶವು ನಡೆಸಿದ ಪ್ರತೀಕಾರದ ಕ್ರಮಗಳ ನಂತರ ನಡೆಯುತ್ತಿರುವ ಮೊದಲ ಕೇಂದ್ರ ಸಚಿವ ಸಂಪುಟ ಸಭೆ ಇದಾಗಿದೆ.

****************

ಭಾರತೀಯ ರಿಸರ್ವ್ ಬ್ಯಾಂಕಿನ ಹಣಕಾಸು ನೀತಿ ಸಮಿತಿ-ಎಂಪಿಸಿ, ಸಭೆ ಇಂದು ಆರಂಭವಾಗಿದೆ. ಸಭೆಯಲ್ಲಿ ರೆಪೊ ದರ ಕಡಿತದ ಬಗ್ಗೆ ನಿರ್ಧರಿಸಲು ಚರ್ಚೆ ನಡೆಸಲಾಗುತ್ತಿದೆ. ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಅಧ್ಯಕ್ಷತೆಯಲ್ಲಿ, ಸಮಿತಿಯ ನಿರ್ಧಾರವನ್ನು ಇದೇ ಶುಕ್ರವಾರ ಪ್ರಕಟಿಸಲಾಗುವುದು. ಅರ್ಥಶಾಸ್ತ್ರಜ್ಞರು ಮತ್ತು ಉದ್ಯಮ ತಜ್ಞರ ಪ್ರಕಾರ, ಕೇಂದ್ರ ಬ್ಯಾಂಕ್ ರೆಪೊ ದರದಲ್ಲಿ ಮೂರನೇ ೨೫ ಬೇಸಿಸ್ ಪಾಯಿಂಟ್ ಕಡಿತವನ್ನು ಶೇಕಡ ೫.೭೫ ಕ್ಕೆ ಇಳಿಸುವ ಸಾಧ್ಯತೆಯಿದೆ. **SBI** ನ ನೂತನ ವರದಿಯು, ಜೂನ್ ತಿಂಗಳಿನ ಆರ್‌ಬಿಐ, ಎಂ.ಪಿ.ಸಿ ನೀತಿಯಲ್ಲಿ ಮೆಗಾ ೫೦-ಬೇಸಿಸ್ ಪಾಯಿಂಟ್ ದರ ಕಡಿತವನ್ನು ಸಹ ಅಂದಾಜಿಸಲಾಗಿದೆ. ಹಿಂದಿನ ಎರಡು ಹಣಕಾಸು ನೀತಿ ವಿಮರ್ಶೆಗಳಲ್ಲಿ ರಿಸರ್ವ್ ಬ್ಯಾಂಕ್ ಈಗಾಗಲೇ ರೆಪೊ ದರವನ್ನು ೫೦ ಬೇಸಿಸ್ ಪಾಯಿಂಟ್‌ಗಳಿಂದ ಕಡಿಮೆ ಮಾಡಿ, ಅದನ್ನು ಶೇಕಡಾ ೬ ಕ್ಕೆ ಇಳಿಸಿದೆ.

****************

ಇಂಡಿಯನ್ ಪ್ರೀಮಿಯರ್ ಲೀಗ್ - ಐಪಿಎಲ್ ಟಿ-೨೦ ಕ್ರಿಕೆಟ್‌ನ ೧೮ ನೇ ಆವೃತ್ತಿಯ ಪ್ರಶಸ್ತಿಯನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಮುಡಿಗೇರಿಸಿಕೊಂಡಿದೆ.ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯಾವಳಿ ೨೦೨೫ ರ ವಿಜೇತರಾದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ, ಇಂದು ಬೆಂಗಳೂರು ನಗರಕ್ಕೆ ಆಗಮಿಸಲಿದೆ. ಚೊಚ್ಚಲ ಬಾರಿಗೆ ಐಪಿಎಲ್ ಟಿ-೨೦ ಪ್ರಶಸ್ತಿಯನ್ನು ಗೆದ್ದಿರುವ ಈ ಸಂದರ್ಭದಲ್ಲಿ ಆಯೋಜಿಸಲಾಗಿರು ಹಲವಾರು ಸಂಭ್ರಮಾಚರಣೆಗಳಲ್ಲಿ ಭಾಗಿಯಾಗಲಿದೆ. ಮಧ್ಯಾಹ್ನ ೧ ಗಂಟೆ ೩೦ ನಿಮಿಷಕ್ಕೆ ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಆರ್‌ಸಿಬಿ ತಂಡ ಆಗಮಿಸಲಿದೆ. ಸಂಜೆ ೪ ಗಂಟೆಗೆ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಇತರ ಗಣ್ಯರು ವಿಜಯಶಾಲಿ ತಂಡದ ಸದಸ್ಯರನ್ನು ಬರಮಾಡಿಕೊಳ್ಳಲಿದ್ದು, ವಿಧಾನಸೌಧದ ಮುಂದೆ ಅವರನ್ನು ಸನ್ಮಾನಿಸಲಿದ್ದಾರೆ. ನಂತರ ಆರ್‌ಸಿಬಿ

ತಂಡವು, ಸಂಜೆ ೬ ಗಂಟೆಗೆಯಿಂದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಭಿಮಾನಿಗಳೊಂದಿಗೆ ವಿಜಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲಿದೆ. ಈ ಹಿನ್ನೆಲೆಯಲ್ಲಿ ಹೆಚ್ಚಿನ ಪೊಲೀಸ್ ಬಂದೋಬಸ್ತ್ ನಿಯೋಜನೆ ಮಾಡಲಾಗಿದೆ.

*****************

ಲಡಾಖ್ ಸ್ವಾಯತ್ತ ಗುಡ್ಡಗಾಡು ಅಭಿವೃದ್ಧಿ ಮಂಡಳಿ ತಿದ್ದುಪಡಿ ನಿಯಂತ್ರಣ ನಿಯಮಗಳು, ೨೦೨೫ ಅನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಕಟಿಸಿದ್ದಾರೆ. ಇದು ೧೯೯೭ ರ ಲಡಾಖ್ ಸ್ವಾಯತ್ತ ಗುಡ್ಡಗಾಡು ಅಭಿವೃದ್ಧಿ ಮಂಡಳಿ ಕಾಯ್ದೆಯಲ್ಲಿ ಮತ್ತಷ್ಟು ತಿದ್ದುಪಡಿ ತರಲಿದೆ. ಒಟ್ಟು ಸ್ಥಾನಗಳಲ್ಲಿ ಮೂರನೇ ಒಂದು ಭಾಗವನ್ನು ಮಹಿಳೆಯರಿಗೆ ಮೀಸಲಿಡಲಾಗುತ್ತದೆ. ತಿದ್ದುಪಡಿಯ ಅಡಿಯಲ್ಲಿ, ಈ ಸ್ಥಾನಗಳನ್ನು ಪ್ರತಿಯೊಂದು ವಿಭಿನ್ನ ಪ್ರಾದೇಶಿಕ ಕ್ಷೇತ್ರಕ್ಕೆ ಗೆಜೆಟೆಡ್ ಅಧಿಸೂಚನೆಯ ಪ್ರಕಾರ ಸರಣಿ ಸಂಖ್ಯೆಗಳ ಮೂಲಕ ಸರದಿಯಲ್ಲಿ ಹಂಚಲಾಗುತ್ತದೆ. ಲಡಾಖ್ ಸ್ವಾಯತ್ತ ಬೆಟ್ಟ ಮಂಡಳಿಯು ಶಾಸನಬದ್ಧ ಸಂಸ್ಥೆಯಾಗಿದ್ದು, ಸಾಮಾನ್ಯ ಮಂಡಳಿಯಲ್ಲಿ ಮೂವತ್ತು ಸದಸ್ಯರು, ಲೇಹ್ ಮತ್ತು ಕಾರ್ಗಿಲ್ ಜಿಲ್ಲೆಯಲ್ಲಿ ಆಡಳಿತ ನಡೆಸುತ್ತಾರೆ.

*****************

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಲಡಾಖ್ ಅಧಿಕೃತ ಭಾಷೆಗಳ ನಿಯಮ-೨೦೨೫ ಅನ್ನು ಪ್ರಕಟಿಸಿದ್ದಾರೆ. ಈ ನಿಯಮವು ಇಡೀ ಕೇಂದ್ರಾಡಳಿತ ಪ್ರದೇಶಕ್ಕೆ ವಿಸ್ತರಿಸಿದೆ. ಕಾನೂನು ಮತ್ತು ನ್ಯಾಯ ಸಚಿವಾಲಯವು, ನಿನ್ನೆ ಈ ನಿಯಮದ ಅಧಿಸೂಚನೆ ಹೊರಡಿಸಿದ್ದು, ಕೇಂದ್ರಾಡಳಿತ ಪ್ರದೇಶದ ಎಲ್ಲಾ ಅಥವಾ ಯಾವುದೇ ಅಧಿಕೃತ ಉದ್ದೇಶಗಳಿಗಾಗಿ ಇಂಗ್ಲಿಷ್, ಹಿಂದಿ, ಉರ್ದು, ಭೋಟಿ ಮತ್ತು ಪುರ್ಗಿ ಭಾಷೆಗಳನ್ನು ಅಧಿಕೃತ ಭಾಷೆಗಳಾಗಿ ಗುರುತಿಸಿದೆ. ಈ ನಿಯಮವು, ಪ್ರಾರಂಭವಾಗುವ ದಿನಾಂಕದ ಮೊದಲು ಇಂಗ್ಲಿಷ್ ಭಾಷೆಯನ್ನು ಅಧಿಕೃತ ಉದ್ದೇಶಗಳಿಗಾಗಿ ಅಧಿಕೃತ ಭಾಷೆಯಾಗಿ ಬಳಸಲಾಗುತ್ತಿತ್ತು.

*****************

ಅಸ್ಸಾಂನಲ್ಲಿ, ಪ್ರವಾಹ ಪರಿಸ್ಥಿತಿ ಭೀಕರವಾಗಿ ಮುಂದುವರೆದಿದೆ. ರಾಜ್ಯದ ೨೧ ಜಿಲ್ಲೆಗಳಲ್ಲಿ ೬ ಲಕ್ಷ ೩೦ ಸಾವಿರಕ್ಕೂ ಹೆಚ್ಚು ಜನರ ಮೇಲೆ ಪರಿಣಾಮ ಬೀರಿದ್ದು, ಸಾವಿನ ಸಂಖ್ಯೆ ೧೨ ಕ್ಕೆ ಏರಿಕೆಯಾಗಿದೆ. ಕಳೆದ ೨೪ ಗಂಟೆಗಳಲ್ಲಿ, ರಾಜ್ಯಾದ್ಯಂತ ಪ್ರವಾಹ ಸಂಬಂಧಿತ ಘಟನೆಗಳಲ್ಲಿ ಆರು ಮಂದಿ ಮೃತಪಟ್ಟಿದ್ದಾರೆ. ಪ್ರವಾಹದಿಂದ ಪೀಡಿತವಾದ ೧ ಸಾವಿರದ ೫೦೦ ಕ್ಕೂ ಹೆಚ್ಚು ಗ್ರಾಮಗಳು ಮತ್ತು ರಾಜ್ಯಾದ್ಯಂತ ೧೪ ಸಾವಿರದ ೭೦೦ ಹೆಕ್ಟೇರ್‌ಗೂ ಹೆಚ್ಚು ಕೃಷಿಭೂಮಿ ಹಾನಿಗೊಳಗಾಗಿವೆ. ರಕ್ಷಣಾ ಕಾರ್ಯಾಚರಣೆಗಾಗಿ ಅಸ್ಸಾಂ ಸರ್ಕಾರವು, ಎಸ್.ಡಿ.ಆರ್.ಎಫ್ ಮತ್ತು ಎನ್.ಡಿ.ಆರ್.ಎಫ್ ತಂಡಗಳನ್ನು ನಿಯೋಜಿಸಿದೆ. ಆರನೇ ದಿನವಾದ ಇಂದು ಕೂಡ ಅಸ್ಸಾಂನಲ್ಲಿ ತೀವ್ರ ಪ್ರವಾಹ ಪರಿಸ್ಥಿತಿ ಮುಂದುವರೆದಿದೆ. ಬ್ರಹ್ಮಪುತ್ರ, ಬರಾಕ್ ಮತ್ತು ಇತರ ಉಪನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ಅಸ್ಸಾಂ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪ್ರಕಾರ, ಸುಮಾರು ೪೦ ಸಾವಿರ ಜನರು ೨೨೩ ಪರಿಹಾರ ಶಿಬಿರಗಳಲ್ಲಿದ್ದಾರೆ. ಧುಬ್ರಿ, ದಕ್ಷಿಣ ಸಲ್ಮಾರಾ ಮಂಕಚಾರ್, ಗೋಲ್ಪಾರಾ, ದಿಮಾ ಹಸಾವೊ, ವೆಸ್ಟ್ ಕರ್ಬಿ ಆಂಗ್ಲಾಂಗ್, ಲಖಿಂಪುರ, ದೇಮಾಜಿ, ಕ್ಯಾಚಾರ್, ಹೈಲಕಂಡಿ ಮತ್ತು ಕೊಕ್ರಜಾರ್ ಜಿಲ್ಲೆಗಳ ಪ್ರತ್ಯೇಕ ಸ್ಥಳಗಳಲ್ಲಿ ಭಾರೀ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ. ಏತನ್ಮಧ್ಯೆ, ನಾಗೋನ್ ಜಿಲ್ಲಾಡಳಿತವು ಕಾಜಿರಂಗ ರಾಷ್ಟ್ರೀಯ ಉದ್ಯಾನವನದ ಮೂಲಕ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ ೭೧೫ ರ ಸಂಪೂರ್ಣ ಉದ್ದಕ್ಕೂ ಗಂಟೆಗೆ ೪೦ ಕಿಲೋಮೀಟರ್ ವೇಗದ ಮಿತಿ ಸೇರಿದಂತೆ ಹಲವಾರು ನಿರ್ಬಂಧಗಳನ್ನು ವಿಧಿಸಿದೆ.

****************

ಭಯೋತ್ಪಾದನೆಯ ವಿರುದ್ಧ ಜಾಗತಿಕ ಮಟ್ಟದಲ್ಲಿ ಅರಿವನ್ನು ಮೂಡಿಸುತ್ತಿರುವ ಭಾರತದ ಏಳು ಸರ್ವಪಕ್ಷ ನಿಯೋಗಗಳು ತಮ್ಮ ಭೇಟಿಯ ಅಂತಿಮ ಹಂತಕ್ಕೆ ತಲುಪಿವೆ. ಮೂರು ನಿಯೋಗಗಳು ಆಯಾ ದೇಶಗಳಿಗೆ ಯಶಸ್ವಿ ಭೇಟಿಯನ್ನು ಮುಗಿಸಿ ಭಾರತಕ್ಕೆ ಮರಳಿವೆ. ಶಿವಸೇನಾ ಸಂಸದ ಶ್ರೀಕಾಂತ್ ಶಿಂಧೆ ನೇತೃತ್ವದ ಸರ್ವಪಕ್ಷ ನಿಯೋಗ ಇಂದು ಬೆಳಿಗ್ಗೆ ನವದೆಹಲಿ ತಲುಪಿತು. ಯುಎಇ, ಲೈಬೀರಿಯಾ, ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯ ಮತ್ತು ಸಿಯೆರಾ ಲಿಯೋನ್‌ಗಳಿಗೆ ಭೇಟಿ ನೀಡಿದ ನಂತರ ಅವರು ಭಾರತಕ್ಕೆ ಮರಳಿದರು. ಜೆಡಿ(ಯು) ಸಂಸದ ಸಂಜಯ್ ಝಾ ನೇತೃತ್ವದ

ನಿಯೋಗವು ಸಿಂಗಾಪುರ, ಜಪಾನ್, ದಕ್ಷಿಣ ಕೊರಿಯಾ, ಮಲೇಷ್ಯಾ ಮತ್ತು ಇಂಡೋನೇಷ್ಯಾ ಭೇಟಿಯನ್ನು ಯಶಸ್ವಿಯಾಗಿ ಮುಗಿಸಿದ ನಂತರ ಭಾರತಕ್ಕೆ ಮರಳಿದೆ. ಎನ್‌ಸಿಪಿ (ಎಸ್‌ಪಿ) ಸಂಸದೆ ಸುಪ್ರಿಯಾ ಸುಲೆ ನೇತೃತ್ವದ ಬಹುಪಕ್ಷ ನಿಯೋಗ ಇಂದು ದೇಶಕ್ಕೆ ಮರಳಲಿದೆ. ಕತಾರ್, ದಕ್ಷಿಣ ಆಫ್ರಿಕಾ, ಇಥಿಯೋಪಿಯಾ ಮತ್ತು ಈಜಿಪ್ಟ್‌ಗೆ ಭೇಟಿ ನೀಡಿದ ನಂತರ ನಿಯೋಗ ಹಿಂತಿರುಗುತ್ತಿದೆ. ಬಿಜೆಪಿ ಸಂಸದ ರವಿಶಂಕರ್ ಪ್ರಸಾದ್ ನೇತೃತ್ವದ ಸಂಸದೀಯ ನಿಯೋಗವು ಪ್ರಸ್ತುತ ಬೆಲ್ಜಿಯಂನ ಬ್ರಸೆಲ್ಸ್‌ನಲ್ಲಿರುವ ಯುರೋಪಿಯನ್ ಒಕ್ಕೂಟದ ಪ್ರಧಾನ ಕಚೇರಿಗೆ ಭೇಟಿ ನೀಡಿದೆ. ಏತನ್ಮಧ್ಯೆ, ಕಾಂಗ್ರೆಸ್ ಸಂಸದ ಡಾ.ಶಶಿ ತರೂರ್ ನೇತೃತ್ವದ ಸರ್ವಪಕ್ಷ ನಿಯೋಗವು ಆಪರೇಷನ್ ಸಿಂಧೂರ್ ಮತ್ತು ಭಯೋತ್ಪಾದನೆಯ ವಿರುದ್ಧ ಭಾರತದ ಬಲವಾದ ನಿಲುವಿನ ಕುರಿತು ವಿವರಿಸಲು ಅಮೆರಿಕ ಕಾಂಗ್ರೆಸ್ ಮತ್ತು ಆಡಳಿತ, ಚಿಂತಕರ ಚಾವಡಿಗಳು, ಮಾಧ್ಯಮ ಮತ್ತು ನೀತಿ ನಿರೂಪಕರನ್ನು ಭೇಟಿ ಮಾಡಲು ವಾಷಿಂಗ್ಟನ್ ಡಿಸಿ ತಲುಪಿದೆ.

*****************

ಜಿನೀವಾದಲ್ಲಿ ನಡೆದ ಲನೇ ವಿಪತ್ತು ಅಪಾಯ ನಿರ್ವಹಣಾ ವೇದಿಕೆಯಲ್ಲಿ ಭಾರತವು ಜಾಗತಿಕ ವಿಪತ್ತು ಸ್ಥಿತಿಸ್ಥಾಪಕತ್ವ ಪ್ರಯತ್ನಗಳಿಗೆ ತನ್ನ ಬದ್ಧತೆಯನ್ನು ಪುನರುಚ್ಚರಿಸಿದೆ. ಪ್ರಧಾನಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಡಾ.ಪಿ.ಕೆ.ಮಿಶ್ರಾ ಅವರು, ನಾರ್ವೆಯ ಅಂತಾರಾಷ್ಟ್ರೀಯ ಅಭಿವೃದ್ಧಿ ಉಪ ಸಚಿವೆ ಸ್ವೈನ್ ರೆನೇಟ್ ಹಾಹೈಮ್ ಅವರೊಂದಿಗೆ ಮಹತ್ವದ ಚರ್ಚೆಗಳನ್ನು ನಡೆಸಿದರು. ವಿಪತ್ತು ನಿರ್ವಹಣಾ ಸಂದರ್ಭದಲ್ಲಿ ಅಂತರರಾಷ್ಟ್ರೀಯ ಸಹಕಾರದ ಮಹತ್ವವನ್ನು ಒತ್ತಿ ಹೇಳಿದರು. ಡಾ.ಪಿ.ಕೆಮಿಶ್ರಾ ಅವರು, ವಿಪತ್ತು ಸಿದ್ಧತೆ ಮತ್ತು ಸ್ಥಿತಿಸ್ಥಾಪಕತ್ವ-ನಿರ್ಮಾಣಕ್ಕೆ ಭಾರತದ ಪೂರ್ವಭಾವಿ ವಿಧಾನವನ್ನು ಪ್ರಸ್ತಾಪಿಸಿದರು. ಸುರಕ್ಷಿತ ಮತ್ತು ಹೆಚ್ಚು ಸ್ಥಿತಿಸ್ಥಾಪಕ ಭವಿಷ್ಯಕ್ಕಾಗಿ ಪಾಲುದಾರಿಕೆಗಳನ್ನು ಬಲಪಡಿಸುವ ಭಾರತದ ಸಮರ್ಪಣೆಯನ್ನು ವಿವರಿಸಿದರು. ವಿಪತ್ತು ಸ್ಥಿತಿಸ್ಥಾಪಕತ್ವ ಪ್ರಯತ್ನಗಳನ್ನು ಹೆಚ್ಚಿಸಲು, ಭಾರತವು ೨೦೦೫ ರ ವಿಪತ್ತು ನಿರ್ವಹಣಾ ಕಾಯ್ದೆಯಡಿಯಲ್ಲಿ ಪರಿಣಾಮಕಾರಿ ವಿಪತ್ತು ಪ್ರತಿಕ್ರಿಯೆಗಾಗಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯೆ ಪಡೆ ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರಗಳು ರಚಿಸಿದೆ.

*****************

ಕೊರಿಯಾ ಗಣರಾಜ್ಯದ ಅಧ್ಯಕ್ಷರಾಗಿ ಆಯ್ಕೆಯಾದ ಲೀ ಜೇ-ಮ್ಯುಂಗ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ, ಭಾರತ-ಕೊರಿಯಾ ವಿಶೇಷ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ವಿಸ್ತರಿಸಲು ಮತ್ತು ಬಲಪಡಿಸಲು ಒಟ್ಟಾಗಿ ಕೆಲಸ ಮಾಡಲು ಎದುರು ನೋಡುತ್ತಿದ್ದೇನೆ ಎಂದು ಹೇಳಿದ್ದಾರೆ.

*****************

ಪಾಕಿಸ್ತಾನಕ್ಕಾಗಿ ಬೇಹುಗಾರಿಕೆ ನಡೆಸುತ್ತಿದ್ದ ಆರೋಪದ ಮೇಲೆ ಬಂಧಿಸಲ್ಪಟ್ಟ ಯೂಟ್ಯೂಬರ್ ಜ್ಯೋತಿ ಮಲ್ಹೋತ್ರಾ ನಂತರ, ಪಂಜಾಬ್ ಪೊಲೀಸರು ಇಂದು ಮತ್ತೊಬ್ಬ ಯೂಟ್ಯೂಬರ್, ರೂಪನಗರ ನಿವಾಸಿ ಜಸ್ಬೀರ್ ಸಿಂಗ್ ಅವರೊಂದಿಗೆ ಸಂಪರ್ಕ ಹೊಂದಿರುವ ನಿರ್ಣಾಯಕ ಬೇಹುಗಾರಿಕೆ ಜಾಲವನ್ನು ಪತ್ತೆಹಚ್ಚಿರುವುದಾಗಿ ತಿಳಿಸಿದ್ದಾರೆ. 'ಜಾನ್ ಮಹಲ್' ಎಂಬ ಯೂಟ್ಯೂಬ್ ಚಾನೆಲ್ ಅನ್ನು ನಿರ್ವಹಿಸುತ್ತಿರುವ ಜಸ್ಬೀರ್ ಸಿಂಗ್, ಭಯೋತ್ಪಾದಕ ಬೆಂಬಲಿತ ಬೇಹುಗಾರಿಕೆ ಜಾಲದ ಭಾಗವಾಗಿರುವ ಪಾಕಿಸ್ತಾನ ಗುಪ್ತಚರ ಕಾರ್ಯಕರ್ತ ಶಕೀರ್ ಅಲಿಯಾಸ್ ಜುಟ್ ರಾಂಧವಾ ಜೊತೆ ಸಂಬಂಧ ಹೊಂದಿರುವುದು ಕಂಡುಬಂದಿದೆ. ಅವರು ಹರಿಯಾಣ ಮೂಲದ ಜ್ಯೋತಿ ಮಲ್ಹೋತ್ರಾ ಮತ್ತು ಪಾಕಿಸ್ತಾನ ಪ್ರಜೆ ಹಾಗೂ ಹೊರಹಾಕಲ್ಪಟ್ಟ ಪಾಕಿಸ್ತಾನ ಹೈಕಮಿಷನ್ ಅಧಿಕಾರಿ ಎಹ್ಸಾನ್-ಉರ್-ರಹೀಮ್ ಅಲಿಯಾಸ್ ಡ್ಯಾನಿಶ್ ಅವರೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದ್ದರು ಎಂದು ಪೊಲೀಸ್ ಮಹಾನಿರ್ದೇಶಕ ಗೌರವ್ ಯಾದವ್ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

*****************

ಥೈಲ್ಯಾಂಡ್‌ನ ಪಾಥುಮ್ ಥಾನಿಯಲ್ಲಿರುವ ಥಮ್ಮಸತ್ ಕ್ರೀಡಾಂಗಣದಲ್ಲಿ ಇಂದು ಸಂಜೆ ನಡೆಯಲಿರುವ ಈ।ಈಂ ಅಂತರರಾಷ್ಟ್ರೀಯ ಸ್ನೇಹ ಪಂದ್ಯದಲ್ಲಿ ಥೈಲ್ಯಾಂಡ್ ವಿರುದ್ಧ ಸೆಣಸಲಿದೆ. ಪಂದ್ಯ ಭಾರತೀಯ ಕಾಲಮಾನ ಸಂಜೆ ೬ ಗಂಟೆಗೆ ಆರಂಭವಾಗಲಿದೆ. ಪ್ರಸ್ತುತ ೧೨೭ನೇ ಸ್ಥಾನದಲ್ಲಿರುವ ಬ್ಲೂ ಟೈಗರ್ಸ್, ಜೂನ್ ೧೦ ರಂದು ಕೌಲೂನ್ ಸಿಟಿಯಲ್ಲಿ ನಡೆಯಲಿರುವ ಹಾಂಗ್ ಕಾಂಗ್ ವಿರುದ್ಧದ ಂಈಅ ಏಷ್ಯನ್ ಕಪ್ ಸೌದಿ ಅರೇಬಿಯಾ ೨೦೨೭ ರ ಅರ್ಹತಾ ಸುತ್ತಿನ

ಅಂತಿಮ ಸುತ್ತಿನ ಪಂದ್ಯಕ್ಕೆ ಇದು ಪೂರಕ ಅಭ್ಯಾಸ ಪಂದ್ಯವಾಗಿರಲಿದೆ. ಮತ್ತೊಂದೆಡೆ, ೯೯ ನೇ ಶ್ರೇಯಾಂಕದ ಥೈಲ್ಯಾಂಡ್ ಕೂಡ ಏಷ್ಯನ್ ಕಪ್ ಅರ್ಹತಾ ಸುತ್ತಿನಲ್ಲಿ ಸ್ಪರ್ಧಿಸುತ್ತಿದೆ. ತುರ್ಕಮೆನಿಸ್ತಾನ್ ವಿರುದ್ಧದ ಪಂದ್ಯಕ್ಕೆ ಸಜ್ಜಾಗಲು ಭಾರತದೊಂದಿಗಿನ ಸ್ನೇಹಿ ಪಂದ್ಯವನ್ನು ಆಡಲಿದೆ.

****************

ಮುಂಬೈ ಷೇರು ಮಾರುಕಟ್ಟೆಯಲ್ಲಿಂದು ಷೇರು ಸಂವೇದಿ ಸೂಚ್ಯಂಕ- ಸೆನ್ಸೆಕ್ಸ್ ಆರಂಭಿಕ ವಟಿವಾಟಿನಲ್ಲಿ ೧೫೭ ಅಂಕಗಳು ಏರಿಕೆ ಕಂಡಿಯೊಂದಿಗೆ ೮೦ ಸಾವಿರದ ೮೯೩ ಕ್ಕೆ ತಲುಪಿದೆ. ಇದೇ ವೇಳೆ ರಾಷ್ಟ್ರೀಯ ಸಂವೇದಿ ಸೂಚ್ಯಂಕ-ನಿಫ್ಟಿ, ೭೦ ಅಂಕಗಳ ಏರಿಕೆ ಕಂಡಿದ್ದು, ೨೪ ಸಾವಿರದ ೭೦೩ ರಷ್ಟು ದಾಖಲಾಗಿದೆ. ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿಂದು ಆರಂಭಿಕ ವಹಿವಾಟಿನಲ್ಲಿ ಅಮೆರಿಕನ್ ಡಾಲರ್ ಎದುರು ಭಾರತೀಯ ರೂಪಾಯಿ ಮೌಲ್ಯ ೨೫ ಪೈಸೆ ಕುಸಿದು ೮೫.೮೭ ಕ್ಕೆ ತಲುಪಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>

****************